ಮನೆಮಂದಿಯೆಲ್ಲಾ ಕಂಬಕ್ಕೊರಗಿ ಕುಂತರು. ದೊರೆಯಂತೂ ತಮ್ಮ ಬೆಂಬಲಕ್ಕೆ ಬಾರನು. ಆತನ ನನ್ನ ಕಣ್ಣಾಗೆ ಎಲ್ಲರೂ ಒಂದೇ ಅಂತಾನೆ. ತಳಸಮುದಾಯದಿಂದ ಬಂದ ಅವನಿಗೆ ದೊಡ್ಡ ಜಾತ್ಯಸ್ಥರ ಬೆಲೆ ಮರ್ಯಾದೆ ತಿಳೀದು. ಇಂಥ ಸಮಯದಾಗೆ ತಮ್ಮನ್ನು ಕಾಪಾಡೋರೆಂದ್ರೆ ಮಹಾಸ್ವಾಮಿಗಳು ಮಾತ್ರ ಎಂದೇ ನಂಬಿದ. ದೊರೆಯೂ ಬಾಗೋದು ಗುರುಗಳಿಗಷ್ಟೆ ಎಂದಾಲೋಚಿಸಿದ ಬಸಯ್ಯ, 'ಗಂಗಾ, ನಡಿಯೆ ಮಠಕ್ಕೆ ಹೋಗಿ ಬರೋಣ. ಅವಳ ಮ್ಯಾಗೊಂದು ಕಣ್ಣಿರ್ಲಿ ಕಣ್ರೋ' ಎಂದು ಗಂಡುಮಕ್ಕಳಿಗೆ ತಾಕೀತು ಮಾಡಿ ಹೆಂಡತಿಯೊಡನೆ ಎತ್ತುಗಳ ಬಂಡಿ ಏರಿದ.

ಮುರುಘಾಮಠಕ್ಕೆ ಬಂದಿಳಿದವರೆ ಮಹಾಸ್ವಾಮಿಗಳ ದರುಶನ ಮಾಡಿದ ದಂಪತಿ ಹರಿವಾಣದಲ್ಲಿ ಪಾದಕಾಣಿಕೆ ಸಮರ್ಪಿಸಿ ಪಾದಕ್ಕೆರಗಿದರು. 'ಹೆಂಗಿದ್ದೀರಿ ಬಸಯ್ಯ? ಯಾಪಾರ ಜೋರೋ?' ಗುರುಗಳೂ ಯೋಗಕ್ಷೇಮ ವಿಚಾರಿಸುವಾಗ ದಂಪತಿಯ ಮುಖ ಬಾಡಿರುವುದನ್ನು ಗಮನಿಸಿದರು. 'ಯಾಕ್ರಪ್ಪಾ? ಏನಾತು?' ಕಾಳಜಿ ತೋರಿದರು. ಮಗಳು ಮಾಡಿದ ದ್ರೋಹದ ಬಗ್ಗೆ ಕಣ್ಣೀರ್ಗರೆಯುತ್ತಾ ಬಸಯ್ಯ ಅಲವತ್ತುಕೊಂಡ. ಕ್ಷಣ ಮೌನವಾಗಿದ್ದ ಸ್ವಾಮಿಗಳು 'ಇದರಾಗೇನ್ ಸಮಸ್ಯಾ ಐತ್ರಪಾ? ಆಕಿ ಇಷ್ಟಪಟ್ಟನ್ಗೇ ಲಗ್ನ ಮಾಡಿಕೊಡ್ರಿ' ಅಂದರು. 'ಅಯ್ಯಯ್ಯೋ ಅಂವಾ ಕೀಳು ಜಾತಿಯೋನ್ ಬುದ್ಧಿ' ಹಾವು ಮೆಟ್ಟಿದವನಂತಾಡಿದ ಬಸಯ್ಯ. 'ನೀವು ಬಸವಣ್ಣನೋರ್ನ ಪೂಜಿಸಿದರಾಟೆ ಸಾಲ್ದು. ಅಣ್ಣನ ತತ್ತ್ವವನ್ನೂ ಪಾಲಿಸಬೇಕ್ರಪ್ಪಾ. ನೆಲವೊಂದೇ ಶಿವಾಲಯಕ್ಕೆ ಶೌಚಾಲಯಕ್ಕೆ, ಕುಲವೊಂದೇ ತನ್ನತಾ ಅರಿತವಂಗೆ' ಏನೇನೋ ಸಮಾಧಾನ ಮಾಡಿದರು. 'ಬಿಡ್ರಿಬುದ್ಧಿ. ಈ ವಿಷಯದಾಗೆ ಬಸವಣ್ಣೋರ್ಗೆ ಗೆಲ್ಲೋಕಾಗ್ಲಿಲ್ಲ. ನಮ್ಮಂಥೋರ ಪಾಡೇನು' ಬಸಯ್ಯ ಗುರುಗಳಿಗೇ ತಿರುಮಂತ್ರ ಹೇಳಿದ. 'ಸರಿಯಪ್ಪ. ನಮ್ಮನ್ನೇನು ಮಾಡು ಅಂತೀರ್ರಿ?' ಸ್ವಾಮಿಗಳೂ ಬೇಸರಪಟ್ಟರು. 'ತಾವು ದೊರೆಗಳ್ನ ಕರೆಸಿ ಆ ವಡ್ಡರವನ ಕುಟುಂಬವನ್ನು ಗಡಿಪಾರು ಮಾಡಲು ಆದೇಶ ನೀಡಿ ನನ್ನ ಮಾನ ಉಳಿಸ್ಬೇಕು ಬುದ್ಧಿಯೋರಾ' ಬಸಯ್ಯ ಮತ್ತೆ ಉದ್ದಕೆ ಅಡ್ಡಬಿದ್ದ. 'ನಾವು ದೊರೆಗಳಿಗೆ ಆದೇಶ ಮಾಡೋರಲ್ಲಯ್ಯ, ಆಶೀರ್ವಾದಿಸೋರು. ಆ ಹುಡುಗನ ಮನೆಯೋರ್ನ ಕರ್ಕೊಂಡು ಬಾ. ಲಿಂಗಧಾರಣೆ ಮಾಡೋಣ. ಆಗ ಅವರೂ ನಮ್ಮವರೆ' ತಿಳಿಹೇಳಿದರು ಗುರುಗಳು. 'ಅದು ಆಗಿಬರೋ ಮಾತಲ್ಲ ಬಿಡ್ರಿ ಅಪ್ಪಾರೆ' ಬಸಯ್ಯ ದುಸುಮುಸು ಮಾಡಿದ. 'ನೀವಿನ್ನೂ ಹೋಗಬಹುದು. ನಮಗೆ ಪೂಜೆ ವೇಳೆಯಾಯಿತು' ಸ್ವಾಮಿಗಳೇ ಎದ್ದು ಒಳಹೋದರು.

ಸೋತ ಮೋರೆ ಹಾಕ್ಕೊಂಡು ಬಂಡಿಯಾಗೆ ಹಿಂದಿರುಗೋವಾಗ ಮುಂದೇನು ಎಂಬ ಚಿಂತೆ ಬಸಯ್ಯನನ್ನು ದಹಿಸಿತು. ಪ್ರಧಾನಿಯವರನ್ನೊಮ್ಮೆ ನೋಡಿದರೆ ಪಾಡೇನೋ ಅಂದಿತು ಒಳಗುದಿ. ಮರುದಿನ ಬೆಳಿಗ್ಗೆ ಜಳಕ ಪೂರೈಸಿದವನೇ ಮೇಲುದುರ್ಗದ ಅರಮನೆ ಬಯಲಲ್ಲಿರುವ ಪ್ರಧಾನಿ ನಿವಾಸದ ಬಳಿ ಎಡತಾಕಿದ. ಅದೇ ತಾನೆ ಸಂಧ್ಯಾವಂದನೆ ಮುಗಿಸಿ ಗಿಂಡಿಯೊಳಗಿನ ನೀರನ್ನು ತುಳಸಿಗಿಡಕ್ಕೆ ಹಾಕಲು ಬಂದ ಪ್ರಧಾನಿ ಕಳ್ಳಿ ನರಸಪ್ಪನೂ ಆದರದಿಂದಲೇ ಒಳ ಬರಮಾಡಿಕೊಂಡಾಗ ಬಸಯ್ಯ ತನ್ನ ಮನದಳಲನ್ನು ತೋಡಿಕೊಂಡ. 'ನಿಮ್ಮ ಸ್ವಾಮಿಗಳವರಲ್ವಾ' ಅಂದ ಪ್ರಧಾನಿ. ಮಠದಲ್ಲಾಗಿದ್ದನ್ನೂ ನಿವೇದಿಸಿಕೊಂಡ ಬಸಯ್ಯ, 'ತಾವೇ ನನಗೊಂದು ದಾರಿ ತೋರಿಸಬೇಕು ಸ್ವಾಮಿ' ಗದ್ಗದಿತನಾದ. 'ದೊರೆ, ಗುರು ಈ ವಿಷಯದಾಗೆ ಒಂದೆಯಾ. ಅವರಿಗಂತೂ ಜಾತಿಲ್ಲ ನೀತಿಲ್ಲ ಬಸಯ್ಯ. ಬೀಸೋ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸಯ್ಯ. ಮಗಳ್ನ ಕರ್ಕೊಂಡು ಒಂದೈದಾರು ತಿಂಗಳು ದುರ್ಗ ಬಿಟ್ಟು ದೂರದ ಊರಿಗೆ